# ಕರ್ನಾಟಕ ವಿಧಾನ ಪರಿಷತ್ತು

3

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 18 (209) |
| 2 | ಸದಸ್ಯರ ಹೆಸರು | : | ಶ್ರೀ. ಕೆ.ಪ್ರತಾಪ ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 14-12-2021 |
| 4 | ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಉಡುಪಿ ನಗರಕ್ಕೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಯೋಜನೆಯ ಅಂದಾಜು ಮೊತ್ತವೆಷ್ಟು: ಕರಾರು ಮೊತ್ತವೆಷ್ಟು: ಪ್ರಸ್ತುತ ಈ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡಿದೆ: ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವುವು: ಪಾವತಿಸಿದ ಮೊತ್ತವೆಷ್ಟು: ಪಾವತಿಗೆ ಬಾಕಿಯಿರುವ ಮೊತ್ತವೆಷ್ಟು: ಈ ಕಾಮಗಾರಿಯ ಗುಣಮಟ್ಟ ಪರೀಕ್ಷೆಯನ್ನು ಯಾವ ಏಜೆನ್ಸಿಯ ಮೂಲಕ ನಡೆಸಲಾಗುತ್ತಿದೆ: (ಕಾಮಗಾರಿವಾರು ಮಾಹಿತಿ ನೀಡುವುದು) | ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಕೇಂದ್ರ ಪುರಸ್ಕೃತ ಅಮೃತ್ ಸಹಯೋಗದೊಂದಿಗೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ (ಕ್ವಿಮಿಪ್) ಯೋಜನೆಯಡಿ ಉಡುಪಿ ನಗರಕ್ಕೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಮೂರು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾಮಗಾರಿಗಳ ಅಂದಾಜು ಮೊತ್ತ, ಕರಾರು ಮೊತ್ತ, ಪ್ರಸ್ತುತ ಯೋಜನೆಯ ಪ್ರಗತಿ, ಈ ಕಾಮಗಾರಿಯ ಗುಣಮಟ್ಟ ಪರೀಕ್ಷೆ ಮಾಡಲಾಗುತ್ತಿರುವ ಏಜೆನ್ಸಿಯ ಕುರಿತ ಮಾಹಿತಿಯನ್ನು **ಅನುಬಂಧದಲ್ಲಿ** ವಿವರಿಸಿದೆ. |
| ಆ) | ವರ್ಷದ ಎಲ್ಲಾ ಕಾಲದಲ್ಲೂ ವಾರಾಹಿ ಕಾಲುವೆಯಿಂದ ನೇರ ನೀರನ್ನು ಪಡೆಯಲು ಅವಕಾಶವಿದ್ದರೂ ಅಧಿಕ ವೆಚ್ಚದೊಂದಿಗೆ 6 ತಿಂಗಳು ನದಿಯಿಂದ ನೀರನ್ನು ಪಡೆಯುವ ಔಚಿತ್ಯವೇನು: ನದಿಯಿಂದ 6 ತಿಂಗಳು ನೀರನ್ನು ಪಡೆಯುವದರಿಂದ ಉಡುಪಿ ನಗರ ಸಭೆಗೆ ಆಗುವ ಆರ್ಥಿಕ ಹೊರೆ ಎಷ್ಟು: ನದಿಯಲ್ಲಿ ನೀರನ್ನು ಹರಿಸುವುದರ ಮೂಲಕ ಖಾಸಗಿ ವಿದ್ಯುತ್ ಉತ್ಪಾದನೆಗೆ ಸಹಾಯ ಮಾಡುವ ಉದ್ದೇಶವನ್ನು ಸರಕಾರ ಗಮನಿಸಿದೆಯೇ? | ಕುಂದಾಪುರ ತಾಲ್ಲೂಕಿನ ಹಾಲಾಡಿ ಗ್ರಾಮದ ಚೋರಾಡಿ ಸಮೀಪ ವಾರಾಹಿ ಎಡದಂಡೆ ಮುಖ್ಯ ನಾಲೆಯ 12.950 ಕಿ.ಮೀ. ನ ಎಡಭಾಗದಲ್ಲಿ ಹೆಚ್ಚುವರಿಯಾಗಿ ಔಟ್‌ಲೆಟ್ ನಿರ್ಮಿಸಿ ಉಡುಪಿ ನಗರಕ್ಕೆ ನಾಲೆಯಿಂದಲೇ ನೀರನ್ನು ಸರಬರಾಜು ಮಾಡಲಾಗುವುದು ಇದರಿಂದ ಉಡುಪಿ ನಗರ ಸಭೆಗೆ ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲ ನಾಲೆಯಲ್ಲಿ ನೀರು ಲಭ್ಯವಿರುವಾಗ ನಾಲೆಯಿಂದಲೇ ನೀರನ್ನು ಬಳಸಲಾಗುವುದು ಮತ್ತು ನಾಲೆಯಲ್ಲಿ ನೀರು ಲಭ್ಯವಿಲ್ಲದ ಸಂದರ್ಭದಲ್ಲಿ ನದಿಯಿಂದ ನೀರನ್ನು ಬಳಸಲಾಗುವುದು.<br><br>ನಾಲೆಯಿಂದ ನೀರನ್ನು ಹಾಲಾಡಿಯಲ್ಲಿ |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| | | ನಿರ್ಮಿಸಲಾಗುತ್ತಿರುವ ನೀರು ಶುದ್ಧೀಕರಣ ಘಟಕಕ್ಕೆ ಹರಿಸಿ ಅಲ್ಲಿ ನೀರು ಶುದ್ಧೀಕರಣವಾದ ಬಳಿಕ ಮಾರ್ಗದಲ್ಲಿಯ 23 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಿ, ನೇರವಾಗಿ ಮಣಿಪಾಲದ ಜಿ.ಎಲ್.ಎಸ್.ಆರ್‌ಗೆ ಹರಿಸಲಾಗುವುದು ಇದರಲ್ಲಿ ಯಾವುದೇ ಖಾಸಗಿ ವಿದ್ಯುತ್ ಉತ್ಪಾದನೆಗೆ ಸಹಾಯ ಮಾಡುವ ಉದ್ದೇಶ ಇರುವುದಿಲ್ಲ. |

ಕಡತ ಸಂಖ್ಯೆ: ನಅಇ 236 ಪಿ.ಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು